**CC 1837/2022**

**ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ಗಳ ನ್ಯಾಯಾಲಯ, ಹೊಸಪೇಟೆ.**

**ಸಿಸಿ ನಂಬರ್ 1837/2022**

**ಸಿ ಡಬ್ಲೂಃ 1**

**ಪಿ ಡಬ್ಲೂಃ 1**

| | |
|---|---|
| **ಸಾಕ್ಷಿಯ ಹೆಸರು -** | **ನಾಗರಾಜ** |
| **ತಂದೆಯ ಹೆಸರು -** | **ಕೆ ಬಿ ಸಂಗಪ್ಪ** |
| **ವಯಸ್ಸು -** | **48 ವರ್ಷಗಳು** |
| **ಉದ್ಯೋಗ -** | **ಮುಖ್ಯ ಪೇದೆ, ಹಂಪಿ ಪ್ರವಾಸಿ ಪೋ. ಠಾ.** |
| **ವಾಸಸ್ಥಳ -** | **ಹೊಸಪೇಟೆ** |

**ಸಾಕ್ಷಿಯನ್ನು ದಿನಾಂಕಃ 20-09-2024 ರಂದು ಪ್ರಾಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಎ. ಪಿ. ಪಿ. ಅವರಿಂದ**

ನಾನು ದಿನಾಂಕಃ **21-10-2021** ರಿಂದ **2023** ರವರೆಗೆ ಹೊಸಪೇಟೆ ಪಟ್ಟಣ ಪೋಲಿಸ್ ಠಾಣೆಯಲ್ಲಿ ಮುಖ್ಯ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ **02-06-2022** ರಂದು ನಮ್ಮ ಠಾಣೆಯ ಆರಕ್ಷಕ ನಿರೀಕ್ಷಕರ ಆದೇಶದ ಮೇರೆಗೆ, ಗುಡ್ ಮಾರ್ನಿಂಗ್ ಬೀಟ್ ಮಾಡಲು ನಾನು, ಚಾಸಾ **-4** ರವರೊಂದಿಗೆ ಬೆಳಿಗ್ಗೆ **05-00** ಗಂಟೆಗೆ ಠಾಣೆಯಿಂದ ಹೋಗಿರುತ್ತೇವೆ. ಶಾನಬಾಗ್ ಸರ್ಕಲ್, ರಾಣಿ ಪೇಟೆ, ಹಂಪಿ ರಸ್ತೆ ಕಡೆ ಹೋಗುತ್ತಿದ್ದಾಗ ಬೆಳಿಗ್ಗೆ **06-30** ಕ್ಕೆ ನಮಗೆ ಚೋಳ ವೈನ್ಸ ಎದುರುಗಡೆ ಒಬ್ಬ ವ್ಯಕ್ತಿ ಪ್ಲಾಸ್ಟಿಕ್ ಚೀಲದಲ್ಲಿ ಟೆಟ್ರಾ ಪ್ಯಾಕ ವಿಸ್ಕಿ ಮಾರುತ್ತಿರುವುದಾಗಿ ಬಾತ್ಮಿ ಬಂದಿತ್ತು. ಸದರಿ ವಿಚಾರವನ್ನು ನಮ್ಮ ಠಾಣೆಯ ಆರಕ್ಷಕ ನಿರೀಕ್ಷಕರಿಗೆ ತಿಳಿಸಿದಾಗ ಅವರು ಸ್ಥಳಕ್ಕೆ ಭೇಟಿ ನೀಡಲು ನನಗೆ ಆದೇಶಿಸಿದರು. ಬೆಳಿಗ್ಗೆ **06-40** ಗಂಟೆಗೆ ನಾನು, ಚಾಸಾ **-4** ರವರು ರಿಯಾಜ್ ಬಿರಿಯಾನಿ ಅಂಗಡಿ ಹತ್ತಿರ ನಿಂತು ಸ್ಥಳವನ್ನು ವೀಕ್ಷಿಸಿದಾಗ ಒಬ್ಬ ವ್ಯಕ್ತಿ ಪ್ಲಾಸ್ಟಿಕ್ ಚೀಲದಲ್ಲಿ ವಿಸ್ಕಿ ಟೆಟ್ರಾ ಪ್ಯಾಕ್ ಗಳನ್ನು ದಾರಿಯಲ್ಲಿ ಹೋಗುವ ಜನರಿಗೆ ಮಾರಾಟ ಮಾಡುತ್ತಿರುವುದು ಕಂಡು ಬಂದಿತ್ತು. ಸ್ಥಳದಲ್ಲಿ ಚಾಸಾ **-4** ರವರನ್ನು ವೀಕ್ಷಣೆ ಮಾಡಲು ನಿಲ್ಲಿಸಿ ನಾನು ಠಾಣೆಗೆ ಹಿಂತಿರುಗಿ ದೂರನ್ನು ನೀಡಿರುತ್ತೇನೆ.

ಸದರಿ ದೂರನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ದೂರು ನೋಡಿ ಗುರುತಿಸಿದ್ದು, ಅದನ್ನು ನಿಪಿಃ 1 ಎಂದು, ಸಾಕ್ಷಿಯ ಸಹಿಯನ್ನು ನಿಪಿಃ 1 (ಎ) ಎಂದು ಗುರುತಿಸಲಾಯಿತು.

ಚಾಸಾ -10 ರವರು ದೂರನ್ನು ಸ್ವೀಕರಿಸಿ ದಾಳಿ ಮಾಡಲು ನನ್ನನ್ನು ಮತ್ತು ಚಾಸಾ -5, 6 ರವರನ್ನು ಕರೆದುಕೊಂಡು ದಾಳಿ ಮಾಡಲು ಸಿದ್ಧತೆ ನಡೆಸಿದರು. ಚಾಸಾ -5 ರವರಿಗೆ ಪಂಚರನ್ನು ಕರೆದುಕೊಂಡು ಬರುವಂತೆ ತಿಳಿಸಿದ್ದರು. ಚಾಸಾ -5 ರವರು ಚಾಸಾ - 2 ಮತ್ತು 3 ರವರನ್ನು ಚಾಸಾ -10 ರವರ ಮುಂದೆ ಹಾಜರುಪಡಿಸಿದ್ದರು. ಚಾಸಾ -10 ರವರು ಚಾಸಾ -2 ಮತ್ತು 3 ರವರಿಗೆ ನೋಟಿಸ್ ನೀಡಿ ದಾಳಿಗೆ ಪಂಚರಾಗಿ ಸಹಕರಿಸಲು ಕೋರಿಕೊಂಡಿದ್ದರು. ಅವರು ಒಪ್ಪಿದ ನಂತರ ಬೆಳಿಗ್ಗೆ 08-00 ಗಂಟೆಗೆ ನಾವು ಠಾಣೆಯಿಂದ ಹೊರಟು ಬೆಳಿಗ್ಗೆ 08-10 ಗಂಟೆಗೆ ಚಾಸಾ -4 ರವರು ನಿಂತಿದ್ದ ಸ್ಥಳಕ್ಕೆ ಹೋಗಿರುತ್ತೇವೆ. ನಾವು ನೋಡಿದ್ದ ವ್ಯಕ್ತಿ ಅಲ್ಲಿಯೇ ಇದ್ದದ್ದರಿಂದ ಪಂಚರ ಸಮಕ್ಷಮ ದಾಳಿ ಮಾಡಿರುತ್ತೇವೆ. ಸದರಿ ವ್ಯಕ್ತಿ ನಮ್ಮನ್ನು ನೋಡಿ ಕೈಯಲ್ಲಿದ್ದ ಪ್ಲಾಸ್ಟಿಕ್ ಚೀಲವನ್ನು ಸ್ಥಳದಲ್ಲಿ ಬಿಟ್ಟು ಓಡಿ ಹೋಗಲು ಪ್ರಯತ್ನಿಸಿದ. ಚಾಸಾ -4 ಮತ್ತು 5 ರವರು ಸದರಿಯವರನ್ನು ಹಿಡಿದು ಚಾಸಾ -10 ರವರ ಮುಂದೆ ಹಾಜರುಪಡಿಸಿರುತ್ತಾರೆ. ಸದರಿ ವ್ಯಕ್ತಿ ತನ್ನ ಹೆಸರನ್ನು ತಳವಾರ ಹುಲುಗಪ್ಪ ತಂದೆ ಸಣ್ಣೆಕಪ್ಪ, ಸಾಃ ತಳವಾರಕೇರಿ ಹೊಸಪೇಟೆ ಎಂದು ತಿಳಿಸಿದ. ಪ್ಲಾಸ್ಟಿಕ್ ಚೀಲವನ್ನು ಪಂಚರ ಸಮಕ್ಷಮ ಪರಿಶೀಲಿಸಿದಾಗ ಅದರಲ್ಲಿ 90 ಎಂ ಎಲ್ ನ 126 ಹೈವರ್ಡ್ಸ್ ವಿಸ್ಕಿ ಟೆಟ್ರಾ ಪ್ಯಾಕ್ ಗಳು, 180 ಎಂ ಎಲ್ ನ 2 ಹೈವರ್ಡ್ಸ್ ವಿಸ್ಕಿ ಟೆಟ್ರಾ ಪ್ಯಾಕ್ ಗಳು ಮತ್ತು 180 ಎಂ ಎಲ್ ನ 2 ಓಲ್ಡ ಟ್ಯಾವರನ್ ವಿಸ್ಕಿ ಟೆಟ್ರಾ ಪ್ಯಾಕ್ ಗಳು ಇದ್ದದ್ದು ಕಂಡು ಬಂದಿತ್ತು. ಚಾಸಾ -4 ರವರು ಆರೋಪಿಯ ಅಂಗಶೋಧನೆ ಮಾಡಿದಾಗ ಆತನ ಬಳಿ ರೂ. 1,200/- ನಗದು ಹಣ ದೊರೆತವು. ಆರೋಪಿ ಮದ್ಯ ಮಾರಾಟ ಮಾಡಲು ತನ್ನ ಬಳಿ ಪರವಾನಗಿ ಇರಲಿಲ್ಲ ಎಂದು ತಿಳಿಸಿದ.

**CC 1837/2022**

**ಸಿ ಡಬ್ಲೂ: 1**

**ಪಿ ಡಬ್ಲೂ: 1**

ಪಂಚರ ಸಮಕ್ಷಮ ಮು ಮಾ ಗಳನ್ನು ಚಾಸಾ -10 ರವರು ಸ್ಥಳದಲ್ಲಿಯೇ ಜಪ್ತು ಪಡಿಸಿಕೊಂಡು ಪಂಚನಾಮೆಯನ್ನು ಮಾಡಿರುತ್ತಾರೆ. ಸದರಿ ಪಂಚನಾಮೆಗೆ ನಾನು ಸಹಿ ಮಾಡಿರುತ್ತೇನೆ. ಸಾಕ್ಷಿ ಪಂಚನಾಮೆ ನೋಡಿ ಗುರುತಿಸಿದ್ದು, ಅದನ್ನು ನಿಪಿ: 2 ಎಂದು, ಸಾಕ್ಷಿಯ 2- ಸಹಿಗಳನ್ನು ನಿಪಿ: 2 (ಎ) ಮತ್ತು 2 (ಬಿ) ಎಂದು ಗುರುತಿಸಲಾಯಿತು. ಸಾಕ್ಷಿ 2 ಪೋಟೋಗಳನ್ನು ನೋಡಿ ಗುರುತಿಸಿದ್ದು, ಅವುಗಳ ಗುರುತಿಸುವಿಕೆಗಾಗಿ ಅವುಗಳನ್ನು ಒಟ್ಟಾಗಿ ನಿಪಿ: 3 ಎಂದು ಗುರುತಿಸಲಾಯಿತು. ಸಾಕ್ಷಿ ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. ಮು ಮಾ ಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದಿರುವ ಈಗಾಗಲೇ ರಾಸಾಯನಿಕ ಪರೀಕ್ಷೆಗೆ ಒಳಪಟ್ಟಿರುವ 90 ಎಂ ಎಲ್ ನ 126 ಹೈವರ್ಡ್ಸ್ ವಿಸ್ಕಿ ಟೆಟ್ರಾ ಪ್ಯಾಕ್ ಗಳು, 180 ಎಂ ಎಲ್ ನ 2 ಹೈವರ್ಡ್ಸ್ ವಿಸ್ಕಿ ಟೆಟ್ರಾ ಪ್ಯಾಕ್ ಗಳು ಮತ್ತು 180 ಎಂ ಎಲ್ ನ 2 ಓಲ್ಡ್ ಟ್ಯಾವರನ್ ವಿಸ್ಕಿ ಟೆಟ್ರಾ ಪ್ಯಾಕ್ ಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಮು ಮಾ 1 ರಿಂದ 3 ಎಂದು ಗುರುತಿಸಲಾಯಿತು. ನಾನು ತನಿಖಾಧಿಕಾರಿಯ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆ.

**ಪಾಟೀ ಸವಾಲು: ಆರೋಪಿ ಪರ ಶ್ರೀ ಎನ್ ಎಸ್ ಹೆಚ್., ವಕೀಲರಿಂದ**

ನಾವು ಠಾಣೆಯಿಂದ ಬೆಳಿಗ್ಗೆ 05-00 ಗಂಟೆಗೆ ಗಸ್ತು ತಿರುಗಲು ಹೋಗಿದ್ದೇವು. ನಮಗೆ ಬಾತ್ಮಿ ಬಂದಿದ್ದ ಸ್ಥಳ ನಾವು ಗಸ್ತು ತಿರುಗುತ್ತಿದ್ದ ಸ್ಥಳದಿಂದ ಅರ್ಧ ಕಿ ಮೀ ಅಂತರದಲ್ಲಿ ಇತ್ತು. ನಾನು ಚಾಸಾ -4 ರವರನ್ನು ಸ್ಥಳದಲ್ಲಿ ಬಿಟ್ಟು ಠಾಣೆಗೆ ಹೋಗುವಾಗ ಬೆಳಿಗ್ಗೆ 06-45 ಗಂಟೆ ಆಗಿತ್ತು. ನಾವು ಠಾಣೆಯಿಂದ ಗುನ್ನಾ ಸ್ಥಳಕ್ಕೆ ಹೋಗಲು ಬೆಳಿಗ್ಗೆ 08-00 ಗಂಟೆಗೆ ಬಿಟ್ಟಿರುತ್ತೇವೆ. ನಾವು ಠಾಣೆಯಿಂದ 6 ಜನ ಸ್ಥಳಕ್ಕೆ ಹೋಗಿದ್ದೇವು. ನಾವು ಹೋಗಿದ್ದೇವು ಎನ್ನಲಾದ ವಾಹನಗಳ ನೋಂದಣಿ ಸಂಖ್ಯೆಗಳನ್ನು ನನ್ನ ದೂರಿನಲ್ಲಾಗಲಿ, ನನ್ನ ಹೇಳಿಕೆಯಲ್ಲಾಗಲಿ ನಮೂದು ಮಾಡಿಲ್ಲ.

ಬಿರಿಯಾನಿ ಅಂಗಡಿಯಿಂದ ಗುನ್ನಾ ಸ್ಥಳ 10 ಮೀಟರ್ ಅಂತರದಲ್ಲಿ ಇತ್ತು. ಆ ರೀತಿ ನನ್ನ ಹೇಳಿಕೆಯಲ್ಲಿ ಹೇಳಿ ಬರೆಸಿಲ್ಲ. ನಾವು ಹೋದಾಗ ಸ್ಥಳದಿಂದ ಒಬ್ಬ ವ್ಯಕ್ತಿ ಮಾತ್ರ ಓಡಿ ಹೋದ. ನಾವು ಸ್ಥಳಕ್ಕೆ ಹೋದಾಗ ಮದ್ಯ ಖರೀದಿಸಲು 4-5 ಜನ ಇದ್ದರು. ಆ ಬಗ್ಗೆ ನನ್ನ ಹೇಳಿಕೆಯಲ್ಲಿ ಬರೆಸಿಲ್ಲ.

ಸಾಮಾನ್ಯವಾಗಿ ಮದ್ಯದ ಅಂಗಡಿಗಳ ಮುಂದೆ ಖಾಲಿ ಟೆಟ್ರಾ ಪ್ಯಾಕ್ ಗಳು ಸಿಗುತ್ತವೆ ಅಂದರೆ ಸರಿ. ಟೆಟ್ರಾ ಪ್ಯಾಕ್ ಗಳ ಮೇಲಕೆ ಕಂಪನಿಯ ಬ್ಯಾಚ್ ನಂಬರ್ ನಮೂದು ಆಗಿರುತ್ತದೆ ಅಂದರೆ ಸರಿ. ನನ್ನ ಹೇಳಿಕೆಯಲ್ಲಿ ಬ್ಯಾಚ್ ನಂಬರ್ ನಮೂದು ಮಾಡಿಲ್ಲ. ನನ್ನ ಹೇಳಿಕೆಯಲ್ಲಿ  ಮಾದರಿಗಾಗಿ ಕಳುಹಿಸಿಕೊಟ್ಟ ಟೆಟ್ರಾ ಪ್ಯಾಕ್ ಗಳ ಬ್ಯಾಚ್ ನಂಬರ್ ನಮೂದು ಮಾಡಿಲ್ಲ.

ಗುನ್ನಾ ಸ್ಥಳದಲ್ಲಿ ಬೆಳಿಗ್ಗೆ 08-00 ಗಂಟೆಗೆ ಸಾಕಷ್ಟು ಜನ ಓಡಾಡುತ್ತಾರೆ ಅಂದರೆ ಸರಿ. ನಾವುಗಳು ಗುನ್ನಾ ಸ್ಥಳಕ್ಕೆ ಹೋಗಿಲ್ಲ, ಪಂಚರ ಸಮಕ್ಷಮ ದಾಳಿ ಮಾಡಿಲ್ಲ, ಆರೋಪಿಯನ್ನು ಹಿಡಿದಿಲ್ಲ, ಟೆಟ್ರಾ ಪ್ಯಾಕ್ ಗಳು ನಮಗೆ ಸ್ಥಳದಲ್ಲಿ ಸಿಕ್ಕಿರಲಿಲ್ಲ, ಸ್ಥಳದಲ್ಲಿ ಯಾವುದೇ ಪಂಚನಾಮೆ ಆಗಿಲ್ಲ ಅಂದರೆ ಸರಿಯಲ್ಲ. ನನ್ನ ಸಹಿಯನ್ನು ಸ್ಥಳದಲ್ಲಿ ಮಾಡಿಲ್ಲ ಅಂದರೆ ಸರಿಯಲ್ಲ. ನಾನು ಮೇಲಾಧಿಕಾರಿಗಳ ಮಾತು ಕೇಳಿ ಸುಳ್ಳು ದೂರು ನೀಡಿರುತ್ತೇನೆ ಅಂದರೆ ಸರಿಯಲ್ಲ. ಠಾಣೆಯ ಅಂಕಿ ಅಂಶಗಳಿಗಾಗಿ ಸುಳ್ಳು ದೂರು ಕೊಟ್ಟು, ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರು ವಿಚಾರಣೆ- ಇಲ್ಲ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು
ಹಾಗೂ ಜೆ.ಎಂ.ಎಫ್.ಸಿ., ಹೊಸಪೇಟೆ.